ಶ್ರೀ ಸಿ. ಬೈರೇಗೌಡ : ಈ ವರದಿಯ ಪುಟ 45ರಲ್ಲಿ ಕೆಲವರನ್ನು ಹೊರದೇಶಗಳಿಗೆ ತರಬೇತಿಗೆಂದು ಕಳಿಸಿದ್ದರ ಬಗ್ಗೆ ಏನು ಹೇಳಲಾಗಿದೆ ಎಂದರೆ:

Cost of Training During oral evidence on 16 th August 1988, the Company representative stated that after payment of one instalment it was found that this particular type of motor offered some design, lacuna, though later on AEG changed the design they wanted very high lumpsum payment and royalty for the revised design at the time when the collaboration for the revised design was sought and hence this was not pursued, at the time of original collaboration the appreciation was that orders from certain factories would flow in but they did not come true because competitors offered products with less electric energy consumption with long term saving..."

ಉಪಾಧ್ಯಕ್ಷರು : ಈಗ ಸಮಯ ಒಂದೂವರೆ ಗಂಟೆಯಾಗುತ್ತಿದೆ. ತಾವು ಸೋಮವಾರ ತಮ್ಮ ಭಾಷಣ ಮುಂದುವರೆಸಬಹುದು. ಈಗ ಖಾಸಗೀ ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಸಿ. ಬೈರೇಗೌಡ : ಆಗಬಹುದು.

ಖಾಸಗಿ ಕಾರ್ಯಕಲಾಪಗಳು

ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರಾನೈಟ್ ಕಲ್ಲುಗಳ ನಾಶ ತಪ್ಪಿಸಲು ಸಮಗ್ರ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ

ಉಪಾಧ್ಯಕ್ಷಿಣಿಯವರು: ಶ್ರೀಯುತ ವಾಟಾಳ್ ನಾಗರಾಜ್‌ರವರ ವಿಧೇಯಕದ ಬಗ್ಗೆ ಶ್ರೀಯುತ ವೆಂಕಟೇಶರವರು ಮಾತನಾಡುತ್ತಿದ್ದರು. ಈಗ ಅವರು ಇಲ್ಲ. ಈ ಮಧ್ಯದಲ್ಲಿ ಶ್ರೀಯುತ ಸಿಂಧ್ಯಾರವರು ಮಾತನಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ನಮ್ಮ ಗೌರವಾನ್ವಿತ ಸದಸ್ಯರಾದಗಿರಕ್ಕಂಥ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಖಾಸಗಿ ನಿರ್ಣಯವನ್ನು ಕಳುಹಿಸಿದ್ದಾರೆ. ಆ ಬಗ್ಗೆ ಹೇಳಬೇಕೆಂದರೆ ರಾಜ್ಯದ ಗಣಿ ಸಂಪತ್ತು ಆಗಿರತಕ್ಕಂಥ ಗ್ರಾನೈಟ್ ಕಲ್ಲುಗಳನ್ನು ರಾಷ್ಟ್ರೀಕರಣ ಮಾಡಬೇಕು ಇದರ ಲೂಟಿಯಾಗುತ್ತಿದೆ. ಇದು ವಿದೇಶಗಳಿಗೆ ಹೋಗುತ್ತಿದೆ ಮತ್ತು ಇದನ್ನು ನಿಲ್ಲಿಸಬೇಕು ಎನ್ನತಕ್ಕಂಥ ಪ್ರಯತ್ನವನ್ನು ನಾವು ಬಹಳವಾಗಿ ಮಾಡುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದೆವು. ಪ್ರಸ್ತಾಪ ಮಾಡಿ ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಈ ಗ್ರಾನೈಟ್ ಕಲ್ಲಿನ ವ್ಯವಹಾರ ಅಥವಾ ಅವ್ಯವಹಾರ ಜಾಸ್ತಿಯಾಗುತ್ತಿದೆ. ವಿದೇಶಗಳಿಗೆ ಅಕ್ರಮವಾಗಿ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರತಕ್ಕಂಥ ರಾಜಧನವನ್ನು ತಪ್ಪಿಸುತ್ತಿದ್ದಾರೆ ಇದರ ಬಗ್ಗೆ ನೀವು ನಿಗಾ ಇಡಬೇಕು ಎಂದು ಹೇಳಿ ಬಹುಶಃ ಆಡಳಿತ ಪಕ್ಷದ ಸದಸ್ಯರು ಬಹಳಷ್ಟು ಜನ ಹೇಳಿದ್ದಾರೆ. ನಾವು ವಿರೋಧ ಪಕ್ಷದ ಸದಸ್ಯರು ಆದರಲ್ಲಿಯೂ ನಾನು ಮತ್ತು ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಒತ್ತಾಯಮಾಡಿ ಈ ವಿಚಾರವನ್ನು ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಈ ಬಗ್ಗೆ ನಮ್ಮ ಎಲ್ಲಾ ವಿರೋಧ ಪಕ್ಷಗಳ ನಾಯಕರುಗಳು ವಿರೋಧ ಪಕ್ಷದ ನಮ್ಮ ಈ ಸದನದ ನಾಯಕರಾದಂಥ ಚಂದ್ರೇಗೌಡರು ಮುಖ್ಯಮಂತ್ರಿಯವರಿಗೆ ಒಂದು ಪತ್ರವನ್ನು ನಾವೆಲ್ಲ ಸೇರಿ ಬರೆದೆವು. ಅದು ಏನೆಂದರೆ ಈ ಗ್ರಾನೈಟ್ ಕಲ್ಲಿನ ಬಗ್ಗೆ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಿಂತ

ಮುಂಚೆ ಎಲ್ಲಾ ವಿರೋಧ ಪಕ್ಷಗಳ ನಾಯಕರುಗಳ ಜೊತೆಯಲ್ಲಿ ತಾವು ಮಾತುಕತೆಯಾಡಬೇಕು ಎಂದು ಹೇಳಿ ಒಂದು ಪತ್ರವನ್ನು ಬರೆದು ಸುಮಾರಾಗಿ 40 ದಿವಸಗಳಾಗಿದೆ. ಇವತ್ತಿನವರೆಗೂ ನೀವು ಬನ್ನಿ ಮಾತನಾಡೋಣ ಎಂದು ಹೇಳಿ ನಮ್ಮನ್ನು ಈ ಕ್ಷಣದವರೆಗೂ ಕರೆದಿಲ್ಲ. ಸುಮಾರು 40 ದಿವಸಗಳಾಗಿದೆ ಒಂದು ಪತ್ರವನ್ನು ಬರೆದು. ಇದು ನಿರಂತರವಾಗಿ ಈ ರಾಜ್ಯದಲ್ಲಿ ಲೂಟಿ ನಡೆಯುದೆ. ಹಗಲು ದರೋಡೆಯಾಗುತ್ತಿದೆ. ಅದು ಹಾಗೆ ಹೀಗೆ ಎಂದೇನೂ ಅಲ್ಲ. ಒಂದು ದಿನಕ್ಕೆ ಎರಡುವರೆ ಕೋಟಿ ರೂಪಾಯಿ ಹೋಗುತ್ತಿದೆ. ಇದು ಒಂದು ವರ್ಷಕ್ಕಲ್ಲ ತಿಂಗಳಿಗಲ್ಲ. ದಿನಕ್ಕೆ ಎರಡೂವರೆ ಕೋಟಿ ರೂಪಾಯಿ ಹೋಗುತ್ತಿದೆ. ಅದಕ್ಕೆ ನಾವು ಒಂದು ಪತ್ರವನ್ನು ಬರೆದಿದ್ದೇವೆ. ಈಗಲೂ ಸಹಾ ತಮ್ಮ ಮೂಲಕ ನಾನು ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ ನಮ್ಮನ್ನೆಲ್ಲಾ ಕರೆದು ಕುಳಿತು ಮಾತನಾಡಲಿ. ಇದಕ್ಕಾಗಿ 1400 ಅರ್ಜಿಗಳು ಬಂದಿದೆ ಎಂದು ಹೇಳಿ ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತುಕೊಂಡು ಇಲ್ಲಿಯೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಬೇಡ. ಇದು ತಳದಿಂದ ಮೇಲಿನವರೆಗೂ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತಿದೆ. ಅದಕ್ಕೆ ನಮ್ಮನ್ನು ಕರೆದು ಮಾತನಾಡಿ ಆಮೇಲೆ ಬೇಕಾದರೆ ಏನು ಬೇಕಾದರೂ ಸರ್ಕಾರ ನಿರ್ಧಾರವನ್ನು ತೆಗೆದುಕೊಳ್ಳಲಿ. ಈಗಲೂ ಕರೆದು ಮಾತನಾಡಿ ಎಂದು ಹೇಳಿ ಎಂದು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಶ್ರೀ ಮಾನ್ಯ ವಾಟಾಳ್ ನಾಗರಾಜ್‌ರವರು ಏನು ವಿಚಾರವನ್ನು ಹೇಳಿದ್ದಾರೆ ಅದಕ್ಕೆ ನಾನು ಒಂದು ತಿದ್ದುಪಡಿಯನ್ನು ಸೂಚಿಸುವುದಕ್ಕೆ ಬಯಸುತ್ತೇನೆ. ಮಾನ್ಯ ವೀರೇಂದ್ರ ಪಾಟೀಲ್ ಅವರು ಮುಖ್ಯಮಂತ್ರಿಯಾದ ಪ್ರಾರಂಭದ ದಿನಗಳಲ್ಲಿಯೇ ಏನೋ ಈ ಬಗ್ಗೆ ಕೇಳಿಬರುತ್ತಿದೆಯಲ್ಲಾ ಎಂದು ಹೇಳಿ ಐದಾರು ತಿಂಗಳ ಕಾಲ ಅತ್ತ ಕಡೆ ಗಮನವನ್ನು ಕೊಟ್ಟಿರಲಿಲ್ಲ. ಅದು ಆದ ನಂತರ ನಾವು ಯಾವಾಗ ಬಹಳ ತೀವ್ರವಾಗಿ ಈ ಲೂಟಿ ಜಾಸ್ತಿಯಾಗುತ್ತಿದೆ ಕೋಟ್ಯಾಂತರ ರೂಪಾಯಿ ವ್ಯವಹಾರ ಇದು ಎಂದು ಹೇಳಿ ನಾವು ಹೇಳುವುದಕ್ಕೆ ಪ್ರಾರಂಭ ಮಾಡಿದೆವು ಆಗ ನಮಗೆ ಒಂದು ಆಶ್ವಾಸನೆಯನ್ನು ಕೊಟ್ಟರು. ಮಾನ್ಯ ಸಿಂಧ್ಯಾರವರನ್ನು ಮತ್ತು ವಾಟಾಳ್ ನಾಗರಾಜ್‌ರವರನ್ನು ಕರೆಸಿ ಮಾತನಾಡುತ್ತೇನೆ. ಒಂದು ಕಾನೂನು ತಿದ್ದುಪಡಿಯನ್ನು ನಾವು ಮಾಡುತ್ತಿದ್ದೇವೆ ಈ ದಿಶೆಯಲ್ಲಿ ನಮ್ಮನ್ನು ಕರೆದು ನಾನು ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಆಗ ಈ ಗ್ರಾನೈಟ್ ದೊರೆಗಳಿಂದ ಸಾಕಷ್ಟು ಹಣ ಸಂಗ್ರಹಣೆ ಆಯಿತು ಅದು ಅನಾದೇಯ ಕೈಗಳಿಗೂ ಸಹಿತ ತಲುಪಿತು. ಆದರೆ ನಾನು ಹೇಳುತ್ತೇನೆ ವಿರೇಂದ್ರಪಾಟೀಲರಿಗೆ ಅದು ತಲುಪಲಿಲ್ಲ. ಅದು ನನಗೆ ಗೊತ್ತಿದೆ ಯಾರ ಕೈಗೆ ತಲುಪಿದೆ ಎಂದು ಒಟ್ಟಿನಲ್ಲಿ ಹಣ ತಲುಪಿ. ನಮ್ಮನ್ನು ಕರೆಸಿ ಮಾತನಾಡುತ್ತೇವೆಂದು ಹೇಳಿದರು ಅವರು ನಮ್ಮನ್ನು ಕರೆಸಿ ಮಾತನಾಡುವವರು ಇದ್ದರು. ಅವರಿಗೆ ನಾವು ಯಾವಾಗ ಹಣ ಸಂಗ್ರಹಣೆ ಆಗಿದೆ ಎಂದು ಸದನದಲ್ಲಿ ಹೇಳಿದೆವು ಆ ತಕ್ಷಣಕ್ಕೆ ಅವರು ಒಪ್ಪಿಕೊಂಡರು. ಆಮೇಲೆ ಅವರು ಲೈಸೆನ್ಸ್ ಕೊಡತಕ್ಕಂತಾದ್ದನ್ನು ಸಹಿತ ಕಾನೂನು ತಿದ್ದುಪಡಿ ಬದಲಾವಣೆ ಮಾಡುವಂತಾದ್ದನ್ನು ಅಲ್ಲಿಗೆ ನಿಲ್ಲಿಸಿದರು. ನಮ್ಮನ್ನು ಕರೆಸಿ ಮಾತನಾಡುವವರು ಇದ್ದರು. ಅಷ್ಟರಲ್ಲೆ ಅವರ ಅನಾರೋಗ್ಯ ಕಾರಣದಿಂದ ಅವರು ಅಧಿಕಾರ ಕಳೆದುಕೊಂಡರು. ಅನಂತರ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಮಾನ್ಯ ವಾಟಾಳ್ ನಾಗರಾಜ್ ಅವರು ಈ ವಿಷಯದಲ್ಲಿ ವಿಶೇಷವಾದ ಆಸಕ್ತಿ ತಳೆದು ನಮ್ಮೆಲ್ಲರ ಸಹಿ ಸಂಗ್ರಹ ಮಾಡಿ ಮುಖ್ಯಮಂತ್ರಿಗಳಿಗೆ ಕೊಟ್ಟದ್ದು ನಮ್ಮನ್ನು ಕರೆಸಿ ಮಾತನಾಡಿ ಎಂದು ನಮ್ಮ ಮಾನ್ಯ ಮಂತ್ರಿಗಳಾದ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳಾದ ಉಸ್ತಾದ್ ಸಹೇಬರು ನಮ್ಮನ್ನು ಒಂದು ಸಾರಿ ಸಭೆಗೆ ಬರಬೇಕೆಂದು

ಆಹ್ವಾನ ಕೊಟ್ಟರು. ಆಗ ಸದನ ನಡೆಯುತ್ತಿತ್ತು. ಆದ್ದರಿಂದಾಗಿ ಆ ಸಭೆಗೆ ನಾವು ಹೋಗಲಿಕ್ಕೆ ಆಗಲಿಲ್ಲ. ಎರಡು ಸಲ ಕರೆದರೂ ಹೋಗಲೂ ಆಗಲಿಲ್ಲ. ಆನಂತರ ಏನು ತಿದ್ದುಪಡಿ ಮಾಡಿದ್ದಾರೆ. ಏನು ತಿದ್ದುಪಡಿ ಮಾಡಬೇಕೆಂದು ಇದ್ದಾರೆ ಎಂಬುದು ನಮ್ಮ ಮಾನ್ಯ ಉಸ್ತಾದ್ ಅವರು ಉತ್ಸಾಹಿತರಾಗಿದ್ದಾರೆ. ಅವರು ಅಪ್ರಾಮಾಣಿಕರು ಎಂದು ಹೇಳುವುದಿಲ್ಲ. ಅಥವಾ ಅವರ ಹೆಸರಿನಲ್ಲಿ ಗೊತ್ತಿಲ್ಲದೇ ಇರಬಹುದು. ಇವೊತ್ತು ಬಹಳ ನೋವಿನಿಂದ ಒಂದು ಮಾತನ್ನು ಹೇಳುತ್ತಿದ್ದೇನೆ. ನೀವು ಒಂದು ಪ್ರಶ್ನೆ ಕೇಳಬಹುದು 7 ವರ್ಷಗಳ ಕಾಲ ನೀವು ಆಡಳಿತ ನಡೆಸಿದ್ದೀರಿ ನಿಮ್ಮ ಸರ್ಕಾರ ಇತ್ತು. ನೀವೇನು ಮಾಡಿದ್ದೀರಿ ಎಂದು ಪ್ರಶ್ನೆ ಕೇಳುವುದು ಸ್ವಾಭಾವಿಕ ಮತ್ತು ಸಹಜ ಆದರೆ ಮುಖ್ಯವಾಗಿ ಏತಕ್ಕೆ ಈ ವಿಷಯದ ಬಗ್ಗೆ ನಾನು ಗಮನಕೊಟ್ಟಿದ್ದೇನೆಂದರೆ ನನ್ನ ಕನಕಪುರ ತಾಲ್ಲೂಕಿನ ಜನತೆಯ ಮೇಲೆ ಎರಡು ಅನ್ಯಾಯವಾಗಿದೆ. ಒಂದು ನಮ್ಮ ತೊರೆಕಾಡನಳ್ಳಿಯಿಂದ ಬೆಂಗಳೂರು ನಗರಕ್ಕೆ ನೀರನ್ನು ತೆಗೆದುಕೊಂಡು ಬಂದಿದ್ದೇವೆ. ಕಾವೇರಿ ಮೊದಲನೆ ಹಂತ ಎರಡನೆ ಹಂತದ ಮೂರನೆ ಹಂತದಿಂದ ನೀರನ್ನು ತರುವಾಗ ನಮ್ಮ ರೈತರು ಸಾವಿರಾರು ಎಕರೆ ಜಮೀನು ಹಾಳುಮಾಡಿ ಕೊಂಡಿದ್ದಾರೆ. ಕಳೆದುಕೊಂಡಿದ್ದಾರೆ. ಕೆಟ್ಟಿರುವ ರಸ್ತೆಗಳು ದುರಸ್ತಿಯಾಗಿಲ್ಲ. ಕಾಂಪನ್‌ಸೇಷನ್ ಸಿಕ್ಕಿಲ್ಲ ನಮಗೆ ಕುಡಿಯಲಿಕ್ಕೆ ನೀರು ಇಲ್ಲ. ಆದರೆ ಬೆಂಗಳೂರು ನಗರದಲ್ಲಿರುವರರಿಗೆ ನೀರುಕೊಡುತ್ತಿದ್ದಾರೆ. ಇದು ನಮಗೆ ಆಗಿರತಕ್ಕ ಅನ್ಯಾಯ. ಇತ್ತೀಚೆಗೆ ನಗರಾಭಿವೃದ್ಧಿ ಸಚಿವರು ಒಂದು ದೊಡ್ಡ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಸ್ಥಾನದಲ್ಲಿ ಕುಳಿತುಕೊಂಡು ದೊಡ್ಡ ಹೇಳಿಕೆಯನ್ನು ಕೊಡುವಾಗ ಅದರ ರಿಪ್ಲೆಕ್ಷನ್ ಎನ್ನುವ ವಿಚಾರವನ್ನು ಸಹ ಮಾನ್ಯ ಜಾರ್ಜ್ ಅವರು ಮಾತನಾಡಿಲ್ಲ ಅವರು ಗ್ರೇಟರ್ ಬೆಂಗಳೂರು ಅನ್ನು ಕನಕಪುರದಲ್ಲಿ ಕಟ್ಟುತ್ತೇವೆ ಎಂದು ಹೇಳುತ್ತಾರೆ. ಈ ಮಾತನ್ನು ಅವರು ಹೇಳಿದ ತಕ್ಷಣ ಈಗ ನಮ್ಮ ತಾಲ್ಲೂಕಿನ ರೈತರಿಗೆ ಮತ್ತೆ ದರೋಡೆ ನಡೆದಿದೆ. ಒಂದು ಎಕರೆಗೆ 50 ಸಾವಿರ ರೂಪಾಯಿ ಇದ್ದ ಜಮೀನಿನ ಬೆಲೆ ಒಂದು ಲಕ್ಷ ಒಂದೂಕಾಲು ಲಕ್ಷ ಎಂದು ಹೇಳಿ ಜನರು ವ್ಯವಹಾರ ಮಾಡಲು ಶುರು ಮಾಡಿದ್ದಾರೆ. ಈ ವ್ಯವಹಾರಕ್ಕೆ ಬೇರೆ ಬೇರೆ ರಾಜ್ಯಗಳಿಂದ ಬಂದಿದ್ದಾರೆ ಇವೊತ್ತು ಕನಕಪುರ ಕನಕಪುರವಾಗಿ ಉಳಿದಿಲ್ಲ. ನಮ್ಮ ತಾಲ್ಲೂಕಿನಲ್ಲಿ ದೊಡ್ಡ ದೊಡ್ಡ ಮನುಷ್ಯರು ಹುಟ್ಟಿಹೋಗಿದ್ದಾರೆ ಸ್ವಾತಂತ್ರ ಹೋರಾಟಗಾರರಾಗಿ ಕರಕಪುರದ ವರದಾಚಾರ್ ಇದ್ದರು ಮತ್ತು ಈ ಸದನದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಹೆಸರನ್ನು ಮಾಡಿದಂಥ ಎಸ್. ಕರಿಯಪ್ಪನವರು ಇದ್ದರು. ವಿರೋಧ ಪಕ್ಷದಲ್ಲಿ ಮಳೆಗಾಲ್ ಲಿಂಗೇಗೌಡರು ಇದ್ದರು. ನಾವು ಅವರ ಮುಂದೆ ತೃಣ ಇಲ್ಲ ಅವರ ಪಾದ ಧೂಳಿಯಷ್ಟು ನಾವು ಅವರಷ್ಟು ಸೇವೆ ಮಾಡಿಲ್ಲ. ಅಂತಹ ದೊಡ್ಡ ದೊಡ್ಡ ಮುಷ್ಯರುಗಳಿಲ್ಲಾ ಹೋದರು. ಇವೊತ್ತು ನಮ್ಮ ತಾಲ್ಲುಕಿನಲ್ಲಿ ಏನಾಗುತ್ತಿದೆ ಅಂದರೆ ಇವರು ಗ್ರೇಟರ್ ಬೆಂಗಳೂರು ಎಂದು ಹೇಳಿದ ತಕ್ಷಣ ಜಮೀನು ತೆಗೆದುಕೊಳ್ಳಲಿಕ್ಕೆ ಬೊಂಬಾಯಿಯವರು ಬಂದು ಜಮೀನು ವ್ಯವಹಾರಕ್ಕೆ ಕುಳಿತಿದ್ದಾರೆ. ಮದ್ರಾಸ್‌ನವರು ಬಂದು ಕುಳಿತಿದ್ದಾರೆ. ಇನ್ನು ಕೇರಳದವರು ಬಂದರು ಅಂದರೆ ಮಾನ್ಯ ಜಾರ್ಜ್ ಅವರ ಹೆಸರನ್ನು ಸೇರಿಸುತ್ತೇನೆಂದು ಆಗುತ್ತದೆ. ಅದಕ್ಕೋಸ್ಕರ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಗ್ರೇಟರ್ ಬೆಂಗಳೂರು ಅನ್ನು ನಮ್ಮಲ್ಲಿ ಕಟ್ಟುತ್ತೇವೆಂದು ಹೇಳಿದ್ದಾರೆ ಏತಕ್ಕೋಸ್ಕರ ಗ್ರೇಟರ್ ಬೆಂಗಳೂರು ಕಟ್ಟುತ್ತೀರಿ ಕುಡಿಯುವ ನೀರು ಕೊಡೆಕಾರನಹಳ್ಳಿಯಿಂದ ಬರತಕ್ಕಂಥ ನೀರಿನದು ಬಿ.ಡ.ಬ್ಲ್ಯೂಡಿ.ಎಸ್.ಎಸ್.ಬಿ ಪಂಪಸ್ಟೇಷನಲ್ಲಿ ಬರತಕ್ಕಂತ ಹೊಳಚೆ ನೀರನ್ನು ನಮಗೆ ಕೊಡಿ ಏನಾದರೂ ಸ್ವಲ್ಪ ಮಾಡಿಕೊಳ್ಳುತ್ತೇವೆಂದರೆ ಆ ಕೊಳಚೆ ನೀರು ಸಹ ಕೊಡುವುದಿಲ್ಲ ಎಂದು ಹೇಳುತ್ತಾರೆ. ಇನ್ನು ಅಲ್ಲಿ ಅಲ್ಪಸ್ವಲ್ಪ ಉಳಿದಿದ್ದು ಅಂದರೆ ಕರಿಕಲ್ಲು. ಯಾವಾಗಲೂದರೂ ಮಾನ್ಯ ಮಂತ್ರಿಗಳು ನಮ್ಮ ಕನಕಪುರ ಕ್ಷೇತ್ರಕ್ಕೆ ಬಂದರೆ ನೋಡಬಹುದು. ಹಿಂದೆ ಮಾನ್ಯ

ರಂಗನಾಥರವರು ನಮ್ಮ ಕ್ಷೇತ್ರದ ಹತ್ತಿರ ಹತ್ತಿರ ಬಂದಿದ್ದರು. ಅಷ್ಟರಲ್ಲಿ ವಾಪಸ್ಸು ಬಂದುಬಿಟ್ಟರು. ಅವರು ಇದ್ದಿದ್ದರೆ ನನ್ನ ಕ್ಷೇತ್ರಕ್ಕೆ ಬರುತ್ತಿದ್ದರು. ಅವರು ಇನ್ನು ಎರಡು ಮೈಲಿ ಮುಂದಕ್ಕೆ ಹೋಗಿದ್ದಿದ್ದರೆ ಕುವೈತ್‌ನಲ್ಲಿ ಬಾಗ್ದಾದ್‌ನಲ್ಲಿ ಯಾವರೀತಿ ಬಾಂಬ್ ದಾಳಿಯಾಗುತ್ತಿತ್ತೋ ಅದೇ ರೀತಿಯ ಬಾಂಬ್ ಗಾಳಿ ನಮ್ಮ ಕನಕಪುರದಲ್ಲೂ ಸತತವಾಗಿ ಆಗುತ್ತಿದೆ ನಮ್ಮ ಮಾನ್ಯ ಉಸ್ತಾದ್‌ರವರಿಗೆ ಆ ಬಾಂಬ್ ದಾಳಿ ಕೇಳಿಸುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ ಅವರ ಜಿಲ್ಲೆಯಲ್ಲಿ ಈ ರೀತಿ ಇತ್ತು ಈಗ ಹೊರಟುಹೋಯಿತು ಎಂದು ನಾನು ಕೇಳಿದ್ದೇನೆ. ಇವತ್ತು ನಮ್ಮ ರೈತರು ಪ್ರತಿನಿತ್ಯವೂ ಕೂಡ ತಮ್ಮತನವನ್ನು ಕಳೆದುಕೊಳ್ಳುವ ಮಟ್ಟಕ್ಕೆ ಅವರನ್ನು ತೆಗೆದುಕೊಂಡು ಹೋಗಿದ್ದಾರೆ. ನಮ್ಮ ತಾಲೂಕಿನಲ್ಲಿ ನೀರಾವರಿ ಅಲ್ಲದೆ ಅಂದರೆ ರಾಗಿ ಬೆಳೆಯತಕ್ಕ ಒಂದು ಎಕರೆ ಜಮೀನಿಗೆ 20 ಸಾವಿರ ರೂಗೆ ಲೀಸ್ ಹಾಕಿಸಿಕೊಳ್ಳುತ್ತೇವೆ ಎಂದರೆ ಯಾರು ತಾನೆ ಕೊಡುವುದಿಲ್ಲ ಹೇಳಿ. ಬ್ಯಾಂಕ್‌ನಲ್ಲಿ ಈ 20 ಸಾವಿರ ರೂ ಇಟ್ಟರೆ ಎಷ್ಟೊಂದು ಹಣ ಬರುತ್ತದೆ ನೀವೇ ಲೆಕ್ಕ ಹಾಕಿ. ಒಂದು ವರ್ಷದಲ್ಲಿ 20 ಸಾವಿರ ರೂಪಾಯಿ ರಾಗಿಯನ್ನು ಬೆಳೆಯುವುದಕ್ಕೆ ಸಾಧ್ಯವೆ? ನಮ್ಮ ಜಮೀನನ್ನು ಲೀಸ್‌ಗೆ ತೆಗೆದುಕೊಳ್ಳಿ ನಮ್ಮ ಜಮೀನನ್ನು ಲೀಸ್‌ಗೆ ತೆಗೆದುಕೊಳ್ಳಿ ಎಂದು ರೈತರು ಈ ಗ್ರಾನೈಟ್ ದೊರೆಗಳ ಮುಂದೆ ಕ್ಯೂ ನಿಂತಿದ್ದಾರೆ.

ಶ್ರೀ ಸಿ. ಭೈರೇಗೌಡ: ನಾನು ಮಾನ್ಯ ಮಂತ್ರಿಗಳಲ್ಲಿ ಒಂದು ಮಾತನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈಗಾಗಲೇ ಸುಮಾರು 135ರಿಂದ 140 ಅರ್ಜಿಗಳು ಲೀಸ್ ತೆಗೆದುಕೊಳ್ಳುವುದಕ್ಕೆ ಪೆಂಡಿಂಗ್ ಇವೆ. ಇದನ್ನು ಕೊಡುವುದಕ್ಕೆ ಕಾನೂನು ಕೊಡಕಿದೆ ಎಂಬುದು ನನಗೆ ತಿಳಿದಿದೆ. ಆದರೆ ಈಗಾಗಲೇ ಇದಕ್ಕೂ ಕೂಡ ತಿದ್ದುಪಡಿಯಾಗುತ್ತಿದೆ. ಏಕೆಂದರೆ ತಿದ್ದುಪಡಿಗಳು ಬಹಳ ಜಾಗ್ರತೆ ಚೆನ್ನಾಗಿ ಆಗುತ್ತವೆ. ತಮಗೆಲ್ಲಾ ಗೊತ್ತಿರುವಂತೆ ಬಿ.ಡಿ.ಎ. ಬಗ್ಗೆ ನಗರಾಭಿವೃದ್ಧಿ ಬಗ್ಗೆ ಒಂದು ಕಾನೂನು ಬಂತು ಆದರೆ ಅದನ್ನೆಲ್ಲಾ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿರತಕ್ಕ ಅರ್ಜಿಗಳ ಪೈಕಿ ಕೇವಲ 7 ಜನರಿಗೆ ಮಾತ್ರ ಕೊಡುವುದಕ್ಕೆ ಸಿದ್ಧತೆ ನಡೆದಿದೆ. ಇದನ್ನು ನಾವು ಕಾದು ನೋಡಬೇಕು. ಏಕೆಂದರೆ ಈ ಹಂತದಲ್ಲೇ ನಾನು ದೊಡ್ಡದಾಗಿ ಇದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದು ಒಂದು ರೀತಿಯಲ್ಲಿ ಸ್ಕಾಂಡ್‌ಲ್‌ನೊಳಗಿನ ಸ್ಕಾಂಡಲ್ ಆಗಿದೆ. ಮೂರು ಸಾವಿರ ಚಿಲ್ಲರೆ ಅರ್ಜಿಗಳು ಬಂದಿರುವುದರಲ್ಲಿ ನಿಮಗೆ.

ಶ್ರೀ ಎಂ. ರಾಮಪ್ಪ: ಬಾಟ್ಲಿಂಗ್ ಬಗ್ಗೆ....

ಶ್ರೀ ಸಿ. ಭೈರೇಗೌಡ: ಬಾಟ್ಲಿಂಗ್ ಬಗ್ಗೆ ನಡೆದಿದ್ದು ಎಲ್ಲಾ ಆಯಿತು. ಇದರ ಮುಂದೆ ಅದು ಏನೇನೂ ಇಲ್ಲ. ಬಾಟ್ಲಿಂಗ್ ಎನ್ನತಕ್ಕದ್ದು ಒಂದು ತೃಣ ಕೂಡ ಅಲ್ಲ ಇದರ ಮುಂದೆ ಈಗ ನಡೆಯುತ್ತಿರುವ ಎಕ್ಸ್‌ಪೋಸ್ ವ್ಯವಹಾರಕ್ಕೆ ಹೋಲಿಕೆ ಮಾಡಿದರೆ ಬಾಟ್ಲಿಂಗ್ ಎನ್ನುತಕ್ಕದ್ದು ಒಂದು ಸಣ್ಣ ಕಣ ಕೂಡ ಅಲ್ಲ. ಅಷ್ಟು ದೊಡ್ಡದಾಗಿ ಈ ವ್ಯವಹಾರ ನಡೆಯುತ್ತಿದೆ ಬಹಳ ದೊಡ್ಡ ಪ್ರಮಾಣದಲ್ಲಿ ಗ್ರಾನೈಟ್ ವ್ಯವಹಾರ ನಡೆಯುತ್ತಿದ್ದೆ ಈ ವ್ಯವಹಾರವನ್ನು ಕುದುರಿಸುವ ಜನರೇ ಬೇರೆ ಇದ್ದಾರೆ. ಅದನ್ನು ನಡೆಸುವವರೆ ಬೇರೆ ಇದ್ದಾರೆ ಇದಕ್ಕೆ ಒಂದು ದೊಡ್ಡ ವ್ಯೂಹವೇ ರಚನೆಯಾಗಿದೆ. ಆ 7 ಜನರಿಗೆ ಇದನ್ನು ಕೊಡುತ್ತಾರೆಯೇ ಇಲ್ಲವೇ? ಎಂಬುದನ್ನು ಜನರು ನೋಡುತ್ತಿದ್ದಾರೆ. ಏಕೆಂದರೆ ಅಷ್ಟೊಂದು ತೀವ್ರವಾಗಿ ವ್ಯಾಪಾರ ನಡೆಯುತ್ತಿದೆ. ಇಷ್ಟರಲ್ಲೇ ಈ ವ್ಯಾಪಾರ ಕುದುರುತ್ತದೆಂದು ನಮಗೆ ತಿಳಿದುಬಂದಿದೆ. ಮುಂದೆ ನೋಡೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ ಇದರಲ್ಲಿ ಎಷ್ಟುಮಟ್ಟಿಗೆ ಆಸಕ್ತಿ ಇದೆ ಎಂಬುದನ್ನು ಹೇಳುತ್ತಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಕರಡಿ

ಗುಡ್ಡ ಎಂದು ಇದೆ. ಅದು ನೋಡುವುದಕ್ಕೆ ಒಂದು ಗುಡ್ಡ ಅಷ್ಟೆ ನಾನು ಇದನ್ನು ಹೇಳಿದರೆ ತಮಗೆ ಆಶ್ಚರ್ಯ ಆಗಬಹುದು. ಈ ಗುಡ್ಡವನ್ನು ಪಡೆಯಲು ಇವತ್ತು 5 ಕೋಟಿ ರೂಪಾಯಿಗಳನ್ನು ಒಬ್ಬರು ಅಡ್ವಾನ್ಸ್ ಕೊಟ್ಟಿದ್ದಾರೆ. ಈ ಗುಡ್ಡದಿಂದ ಬರತಕ್ಕ ಕಲ್ಲಿನ ಬೆಲೆ ಕನಿಷ್ಠ ಎಂದರೂ 200 ಕೋಟಿ ರೂಪಾಯಿಗಳು. ಈ ಗುಡ್ಡಕ್ಕೆ ಅರಣ್ಯ ಇಲಾಖೆಯವರು ಸುತ್ತಲೂ ಬೇಲಿಯನ್ನು ಹಾಕಿಕೊಂಡು ಸರ್ಕಾರದವರೇ ಅಲ್ಲ ಯಾರು ಹೇಳಿದರೂ ಕೂಡ ಇದನ್ನು ಬಿಡುವುದಿಲ್ಲ. ಎಂದು ಕೂತಿದ್ದಾರೆ. ಆ ಅಧಿಕಾರಿಯನ್ನು ನಾಳೆ ನಾಡಿದ್ದದಲ್ಲಿ ಎಲ್ಲಿಗೆ ಎತ್ತಿಹಾಕುತ್ತಾರೋ ಗೊತ್ತಿಲ್ಲ, ಇದೇ ರೀತಿ ಕೊಳ್ಳೇಗಾಲ ಯಳಂದೂರು ಚಾಮರಾಜನಗರ ಈ ಮೂರು ಊರುಗಳಿಂದ ಇವತ್ತು ಪ್ರತಿದಿನ ಕನಿಷ್ಠ 1 ಕೋಟಿರೂ ನಷ್ಟ ಕಲ್ಲು ಹೊರಗೆ ಹೋಗುತ್ತಿದೆ.

ಶ್ರೀ ಹೆಚ್. ಏಕಾಂತಯ್ಯ: ಆ ಅಧಿಕಾರಿಯನ್ನು ಬೇರೆ ಕಡೆ ಎತ್ತಿಹಾಕಲಿ ಎಂದು ಆ ಬಗ್ಗೆ ಹೇಳುತ್ತಿದ್ದೀರಾ?

ಶ್ರೀ ವಾಟಾಳ್ ನಾಗರಾಜ್: ಉಸ್ತಾದ್‌ರವರ ಬಗ್ಗೆ ನನಗೆ ಬಹಳ ಗೌರವಿದೆ ಆದರೆ ಒಂದು ಮಾತನ್ನು ಹೇಳುತ್ತೇನೆ. ಈ ಇಲಾಖೆಗೆ ಹೊಸದಾಗಿ ಬಂದ ಎಲ್ಲ ಸಚಿವರೂ ಕೂಡ ಬಹಳ ಧೈರ್ಯವಾಗಿ ಅದು ಏನೇ ಆಗಲಿ ಕಲ್ಲು ತೆಗೆಯುವುದನ್ನು ನಿಲ್ಲಿಸುತ್ತೇವೆ ಎಂದು ಹೇಳುತ್ತಾರೆ ಆನಂತರ ಬರುಬರುತ್ತಾ ಅವರಿಗೆ ಏನಾಗುತ್ತದೋ ಏನೋ ಮಿಲಿ ಮಿಲಿ ಒದ್ದಾಡುತ್ತಾರೆ. ಏನು ಮಾಡಬೇಕು ಏನು ಹೇಳಬೇಕೆಂಬುದು ಅವರಿಗೆ ಗೊತ್ತಾಗುವುದಿಲ್ಲ. ಸನ್ಮೋಹನಾಸ್ತ್ರವನ್ನು ಅವರಮೇಲೆ ಬಿಡುವುದರಿಂದ ಅವರು ಸುಸ್ತಾಗುತ್ತಾರೆ. ಗ್ರಾನೈಟ್ ಮಾಲೀಕರ ಮಾತಿಗೆ ಮೇಣದಂತೆ ಕರಗಿ ಹೋಗುತ್ತಾರೆ. ಆರೀತಿ ಕರಗುವುದು ಬೇಡ ಎಂದು ನನ್ನ ಅನಿಸಿಕೆ.

ಶ್ರೀ ಎಂ ರಾಮಪ್ಪ: ನೀವು ಇಷ್ಟೊಂದು ಹೇಳುತ್ತಿರುವುದನ್ನು ನೋಡಿದರೆ ನೀವೂ ಕೂಡ ಇದರಲ್ಲಿ ಭಾಗವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರೇನೋ ಅನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್: ಈ ಅವಿವೇಕದ ಮಾತು ಈ ದೇಶಕ್ಕೆಲ್ಲಾ ಗೊತ್ತಿದೆ

ಉಪಾಧ್ಯಕ್ಷರು: ಮಾನ್ಯ ಸಿಂಧ್ಯಾ ಅವರು ಈಗ ಮುಂದುವರೆಸಬೇಕು. (ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ರಾಮಪ್ಪನವರು ಇದುವರೆಗೆ ಇರಲಿಲ್ಲ ಸರ್ಕಾರದ ಜೊತೆಯಲ್ಲಿ ಮುನಿಸಿಕೊಂಡು ಹೊರಗಡೆ ಹೋಗಿದ್ದರು ಅದೇನೋ ಇದ್ದಕಿದ್ದಹಾಗೆ ಬಂದಿದ್ದಾರೆ ಇದಕ್ಕಿದ್ದಹಾಗೆ ಶುರುಮಾಡಿದ್ದಾರೆ. ಅದೇನೆಂದು ನನಗಂತೂ ಗೊತ್ತಿಲ್ಲ. ಅವರು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮುನಿಸಿಕೊಂಡು ಹೋಗಿದ್ದಾರೆಂದು ನಾನು ಅಂದುಕೊಂಡಿದ್ದೆ 3-4 ದಿವಸಗಳಿಂದ ಅವರು ಕಂಡಿರಲಿಲ್ಲ ಇವತ್ತು ಇದ್ದಕಿದಂತೆ ಬಂದಿರತಕ್ಕಂಥದ್ದನ್ನು ನೋಡಿ ನನಗೆ ಆಶ್ಚರ್ಯವಾಯಿತು.

(ಮಾನ್ಯ ಸದಸ್ಯರಾದ ರಾಮಪ್ಪನವರು ಸ್ವಿಚ್ ಹಾಕದೆ ಮಾತನಾಡಿದ್ದರಿಂದ ಏನೂ ಗೊತ್ತಾಗಲಿಲ್ಲ)

ಶ್ರೀ ಪಿ.ಜಿ.ಆರ್. ಸಿಂಧ್ಯ: ಹೋಗಲಿ ಬಿಡಿ ರಾಮಪ್ಪನವರೇ.

ಶ್ರೀ ವಾಟಾಳ್ ನಾಗರಾಜ್: ವಾಟಾಳ್ ನಾಗರಾಜ್ ಏನು ರಾಮಪ್ಪ ಏನು ಎನ್ನುವುದು ಇಡೀ ದೇಶಕ್ಕೆ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷೆಯವರೇ ನಾನು ಏತಕ್ಕೆ ಈ ವಿಚಾರದ ಬಗ್ಗೆ ಆಸಕ್ತಿಯನ್ನು ವಹಿಸಿದ್ದೇನೆ ಎನ್ನುತಕ್ಕಂಥ ವಿಚಾರವನ್ನು ಹೇಳುತ್ತಿದ್ದೆ ನಿಮಗೆ. ಆಮೇಲೆ ಏನಾಗಿದೆ ಎಂದರೆ .

ಉಪಾಧ್ಯಕ್ಷಿಣಿಯವರು: ಮಾನ್ಯ ಸಿಂಧ್ಯರವರೇ ತಾವು ಇನ್ನು 10 ನಿಮಿಷಗಳಲ್ಲಿ ಮುಗಿಸಿದರೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ.

(INTERRUTPTIONS)

SRI M.L. USTAD: (Minister of State Mines Geology) Madam Deputy Speaker,

ಉಪಾಧ್ಯಕ್ಷಿಣಿಯವರು: ಇಲ್ಲ ಅವರು ಏನು ಹೇಳುತ್ತಾರೆನ್ನುವುದನ್ನು ಕೇಳಿ

SRI M.L. USTAD: In view of Natification 401 of 1990-91, this is to be dropped now Madam.

ಎರಡನೆಯದಾಗಿ ಮಾನ್ಯ ಸದಸ್ಯರುಗಳು ಈ ಬಗ್ಗೆ ಸವಿಸ್ತಾರವಾಗಿ ನಮ್ಮ ಡಿಮ್ಯಾಂಡ್ ಬಂದಾಗ ಮಾತನಾಡಬಹುದು. ಈಗ ಸದ್ಯಕ್ಕೆ ಡ್ರಾಪ್ ಮಾಡಬೇಕು ಮತ್ತೆ ಏನೂ ಇಲ್ಲ ನನ್ನ ಉತ್ತರ

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ: ಯಾವುದನ್ನು ಡ್ರಾಪ್ ಮಾಡಬೇಕು?

ಶ್ರೀ ಎಂ.ಎಲ್. ಉಸ್ತಾದ್: ರೆಸಲ್ಯೂಷನ್ ಬಗ್ಗೆ ನೀವು ಮಾತನಾಡಿ ನಿಮ್ಮದು ಮುಗಿಯಿತು ಎಂದು ಹೇಳಿಬಿಟ್ಟಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಯಾರು ಹೇಳಿದ್ದು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷಿಣಿಯವರೇ ಈ ಬಗ್ಗೆ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಕೆಲವರು ನ್ಯಾಯಾಲಯಕ್ಕೆ ಹೋಗಿ ತಡೆ ಆಜ್ಞೆ

ಉಪಾಧ್ಯಕ್ಷಣಿಯವರು: ಸಹಾಯ ಮಾಡುವವರೇ ಮಾತು ಜಾಸ್ತಿಯಾಯಿತಲ್ರಿ

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷಿಣಿಯವರೇ ತಾವು ನನ್ನು ಮೇಲೆ ಕರುಣೆ ಇಡಬೇಕ. ಏತಕ್ಕೆಂದರೆ ಈ ವಿಚಾರದಲ್ಲಿ ಹಗಲು ರಾತ್ರಿ ಹೋರಾಟ ಮಾಡಿದ್ದೇನೆ. ಇದರಲ್ಲಿ ಏನಾಗಿದೆ ಎಂದರೆ ನಮ್ಮ ನ್ಯಾಯಾಲಯದಲ್ಲಿ ಅನೇಕರಿಗೆ ಇದರ ಬಗ್ಗೆ ತಡೆಯಾಜ್ಞೆ ಬಂದಿದೆ. ತಡೆಯಾಜ್ಞೆಯನ್ನು ತೆರವು ಮಾಡುವುದಕ್ಕೆ ಸರ್ಕಾರದವರು ಸರಿಯಾದ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಉಪಾಧ್ಯಕ್ಷಿಣಿಯವರೇ ನಾನು ಏತಕ್ಕೆ ಈ ವಿಚಾರದಲ್ಲಿ ಆಸಕ್ತಿಯನ್ನು ವಹಿಸಿದ್ದೇನೆಂದರೆ ಮಾನ್ಯ ರಾಮಪ್ಪನವರು ಈಗ ತಾನೇ ಹೇಳಿದರು ನೀವು ಇದರಲ್ಲಿ ಶಾಮೀಲಾಗಿರಬಹುದೆಂದು. ನಿಜ ಸ್ವಾಭಾವಿಕವಾಗಿ ಇದರ ಬಗ್ಗೆ ಒತ್ತಿ ಒತ್ತಿ ಹೇಳುತ್ತಿರುವುದರಿಂದ ಸ್ವಾಭಾವಿಕವಾಗಿ ಸಂಶಯ ಬರುವುದರಲ್ಲಿ ಅರ್ಥವಿದೆ. ಏಕೆಂದರೆ ಇವತ್ತು ಸಮಾಜದಲ್ಲಿ ರಾಚಕಾರಣಿಗಳ ಬಗ್ಗೆ ಹಾಗೂ ನಮ್ಮೆಲ್ಲರ ಬಗ್ಗೆ ಎಷ್ಟೊಂದು ದೊಡ್ಡ ಗೌರವವಿದೆ ಎನ್ನತಕ್ಕಂಥದ್ದು ಮತ್ತು ನಮ್ಮ ವರ್ತನೆಗಳು ಇಲ್ಲಿಂದ ಡೆಲ್ಲಿಯವರೆಗೆ ಗೊತ್ತಿರತಕ್ಕಂಥ ವಿಚಾರ. ಆದ್ದರಿಂದ ಸ್ವಾಭಾವಿಕವಾಗಿ ಇದು ಬರಲಿಕ್ಕೆ ಸಾಧ್ಯ ಆದ್ದರಿಂದ ನಾನು ಒಂದು ಏನು ಹೇಳುತ್ತಿದ್ದೇನೆ ಅಂದರೆ ಇದು ಸಾಧ್ಯವಿದೆ. ಈ ಸದನದಲ್ಲಿ ಮಾತನಾಡುತಕ್ಕಂಥ ಸಂದರ್ಭದಲ್ಲಿ ಇದು ಇನ್ನೂ 30 ವರ್ಷಗಳ ಕಾಲವಾದರೂ ರೆಕಾರ್ಡ್‌ನಲ್ಲಿರುತ್ತದೆನ್ನುವುದು ನನಗೆ ಗೊತ್ತಿದೆ. ಆದ್ದರಿಂದ

ನಾನು ಹೇಳುತ್ತಿದ್ದೇನೆ ಈ ಒಂದು ಗ್ರಾನೈಟ್ ಕಲ್ಲು ಮತ್ತು ನಮ್ಮ ರಾಜ್ಯದ ಭೂಮಿ ಒಳಗಡೆ ಇರತಕ್ಕಂಥ ಗಣಿ ಸಂಪತ್ತು ಏನು ಇದೆ ಇದು ಅವರಿಗೆ ಕೊಡಿ ಇವರಿಗೆ ಕೊಡಿ ಅನ್ನ ಮಾತನ್ನು ಹೇಳುತ್ತಿಲ್ಲ ನಾನು ಹೇಳುತ್ತಿದ್ದೇನೆ ಇದು ರಾಷ್ಟ್ರೀಕರಣವಾಗಬೇಕೆಂದು ಇದು ತಮಗೂ ಗೊತ್ತಿದೆ ಮಾನ್ಯ ರಾಮಪ್ಪನವರಿಗೂ ಗೊತ್ತಿದೆ ರಾಷ್ಟ್ರೀಕರಣದಲ್ಲಿ ಎಷ್ಟೊಂದು ನಂಬಿಕೆ ಇದೆ ಎನ್ನುವುದು ತಮಗೆ ಗೊತ್ತಿದೆ 1964 ನೇ ಇಸವಿಯ ನಂತರ ನಮ್ಮ ರಾಜ್ಯದಲ್ಲಿ ರಸ್ತೆಸಾರಿಗೆ ಸಂಸ್ಥೆಯ ಒಂದು ವಿಚಾರದಲ್ಲಿ ಹೇಳುವುದಾದರೆ ಸಾರಿಗೆ ರಾಷ್ಟ್ರೀಕರಣ ಮಾಡಲು ಯಾರೂ ಇರಲಿಲ್ಲ ದಿವಂಗತ ದೇವರಾಜ ಅರಸರವರನ್ನು ಬಿಟ್ಟರೆ 1977ನೇ ಇಸವಿಯಲ್ಲಿ ಒಂದು ಸಾವಿರ ಕಾಂಟ್ರಾಕ್ಟ್ ಕ್ಯಾರೇಜ್‌ಗಳನ್ನು ತೆಗೆದುಕೊಂಡಿರುವುದನ್ನು ಬಿಟ್ಟರೆ ಯಾರೂ ರಾಷ್ಟ್ರೀಕರಣವನ್ನು ಮಾಡಿರಲಿಲ್ಲ. ಆದರೆ ನಾನು ಬೀದರ್ ಗುಲ್ಬರ್ಗಾ ರಾಯಚೂರು ಜಿಲ್ಲೆಗಳನ್ನು ರಾಷ್ಟ್ರೀಕರಣ ಮಾಡುವುದರ ಜೊತೆಗೆ ಏತಕ್ಕೆಂದರೆ ನೀವು ಹೇಳಬಹುದು. ಏನೆಂದರೆ ನೀವು ಅಧಿಕಾರದಲ್ಲಿ ಇಲ್ಲ ಆದಕ್ಕಾಗಿ ರಾಷ್ಟ್ರೀಕರಣವನ್ನು ಕೇಳುತ್ತಿದ್ದೀರಿ ಎಂದು ನಾನು ಆದಾಕಾರದಲ್ಲಿದ್ದಾಗ ನಮ್ಮ ಸಹೋದ್ಯೋಗಿಗಳೊಬ್ಬರು ಬಸ್ಸಿನ ಮಾಲೀಕರಾಗಿದ್ದರು. ನಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳು ಅವರ ಸಂಬಂಧಿಕರು ಇವತ್ತು ನಮ್ಮ ಪಕ್ಷದಲ್ಲಿದ್ದಾರೆ. ನಾನು ರಾಷ್ಟ್ರೀಕರಣ ಮಾಡತಕ್ಕ ಸಂದರ್ಭದಲ್ಲಿ ರಾಜಕೀಯವಾಗಿ ಬೆಲೆ ಕೊಡಬೇಕಾಗಿ ಬಂತು. ಅದು ಬೇರೆ ವಿಚಾರ ಚಿತ್ರದುರ್ಗ ಮತ್ತು ದಾವಣಗೆರೆ ಮಧ್ಯೆ 40 ಕಿಲೋಮೀಟರ್ ರಾಷ್ಟ್ರೀಕರಣ ಮಾಡಿಜೆ. ನನಗೆ ಇದರಲ್ಲಿ ನಂಬಿಕೆ ಇದೆ. ರಸ್ತೆ ಸಾರಿಗೆ ಇಲಾಖೆಯನ್ನು ನಡೆಸಬೇಕಾದರೆ ದೊಡ್ಡ ಯೋಗ್ಯತೆ ಬೇಕಾಗುತ್ತದೆ ರಸ್ತೆ ಸಾರಿಗೆ ಸಂಸ್ಥೆಯ 25 ವರ್ಷಗಳ ಇತಿಹಾಸದಲ್ಲಿ ನನ್ನ ಕಾಲವನ್ನು ಗೋಲ್ಡನ್ ಈಯರ್ ಎಂದು ಹೇಳಬೇಕಾಗುತ್ತದೆ. ಆದರಿಂದಾಗಿ ನನಗೆ ರಾಷ್ಟ್ರೀಕರಣದಲ್ಲಿ ಸಂಪೂರ್ಣವಾದ ನಂಬಿಕೆ ಇದೆ ನನಗೆ ತತ್ವದಲ್ಲಿ ಅಪಾರ ವಿಶ್ವಾಸ ಇದೆ. ಆದ್ದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಯಾರಿಗೆ ಈ ಕಂಟ್ರಾಕ್ಟ್ ಕೊಡುತ್ತಿದ್ದೀರಿ ಲೈಸೆನ್ಸ್ ಕೊಡುತ್ತಿದ್ದೀರಿ ಆ 7 ಜನರ ಹೆಸರನ್ನು ಹೇಳಬಲ್ಲೆ. ಆದರೆ ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ಏತಕ್ಕೆ ಹೊಟ್ಟೆ ಉರಿಯುತ್ತಿದೆ ಎಂದರೆ ಕಳೆದ ಹತ್ತು ವರ್ಷಗಳಲ್ಲಿ ನನ್ನ ಕ್ಷೇತ್ರದ ಜನತೆಗೋಸ್ಕರ ನಾನು ಏನು ರಕ್ತವನ್ನು ಸುರಿಸಿದ್ದೇನೆ. ಅದು ಹಾಳಾಗಿ ಹೋಗುತ್ತಿದೆ. ಏತಕ್ಕೆ ಎಂದು ಹೇಳುತ್ತೇನೆ 5 ಲಕ್ಷ ರೂಪಾಯಿ ಗ್ರಾಂಟನ್ನು ಒಂದು ಕ್ಷೇತ್ರಕ್ಕೆ ತೆಗೆದುಕೊಂಡು ಹೋಗುವುದು ಎಷ್ಟು ಕಷ್ಟ ಎಂಬುದು ನನಗೆ ಗೊತ್ತಿದೆ. ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಿ ಕಟ್ಟಿಸಿದ ಕಲ್‌ವರ್ಟ್‌ಗಳು ಮತ್ತು ಎಲ್ಲಾ ಪ್ರಾಜೆಕ್ಟ್‌ಗಳು ಬಿದ್ದು ಹೋಗುತ್ತಿವೆ. ಏಕೆಂದರೆ ಇವತ್ತಿನ ದಿವಸ ಒಂದೊಂದು ಲಾರಿಯಲ್ಲಿ 20-25 ಟನ್‌ನಂತೆ 125 ಲಾರಿಗಳಲ್ಲಿ ಬೆಳಗಿನಿಂದ ಸಂಜೆಯವರೆಗೆ ಮಂಗಳೂರಿಗೆ ಮತ್ತು ಮದ್ರಾಸಿಗೆ ಸಾಗಿಸುತ್ತಿದ್ದಾರೆ. ಇವರು ರಾಜ್ಯ ಸರ್ಕಾರಕ್ಕೆ ಯಾವುದೇ ರಾಜಧನ ಕೊಡುತ್ತಿಲ್ಲ. ಇದರಿಂದ ಯಾರಿಗೆ ಹಾನಿಯಾಗುತ್ತದೆ? ರಾಜ್ಯ ಸರ್ಕಾರ ಏನು ಮಾಡುತ್ತಿದೆ? ಭೂ ವಿಜ್ಞಾನ ಇಲಾಖೆ ಏನು ಮಾಡುತ್ತಿದೆ? ಇವತ್ತು ನಾವು ಕೆಲವು ರಾಜಕಾರಣಿಗಳನ್ನು ಸುಲಭವಾಗಿ ಬೈಯುತ್ತೇವೆ. ನೀವು ನಮ್ಮನ್ನು ನಾವು ನಿಮ್ಮನ್ನು ಬೈಯುತ್ತಿದ್ದೇವೆ. ರಾಮಪ್ಪನವರು ನಾಯಕ್ ಅವರು ನಿಮ್ಮ ಕಾಲದಲ್ಲಿ ಏನಾಯಿತೆಂದು ಕೇಳುತ್ತಾರೆ. ಇಷ್ಟೇ ನಾವು ಮಾಡತಕ್ಕ ಚರ್ಚೆ ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಯಾರಿದ್ದಾರೆ ಅವರನ್ನು ಇಂಟರ್‌ನ್ಯಾಷನಲ್ ಮೆಯಿಂಟಿನೆನ್ಸ್ ಸೆಕ್ಯುರಿಟಿ ಆಕ್ಟ್ ಪ್ರಕಾರ ಅರೆಸ್ಟ್ ಮಾಡಬೇಕು. ಅವರ ಸಾಮೀಲು ಇಲ್ಲದೆ ಯಾವ ವ್ಯವಹಾರಗಳು ಆಗುವುದಕ್ಕೆ ಸಾಧ್ಯವಿಲ್ಲ ಇದನ್ನು ನೇರವಾಗಿ ಹೇಳುತ್ತೇನೆ. ಇವತ್ತು ರಾಜ್ಯಕ್ಕೆ ಏನಾದರೂ ಆಗಬೇಕೆಂದರೆ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಗೆ ಡೆಪ್ಯೂಟೇಷನ್ ಮೇಲೆ ಅಧಿಕಾರಿಗಳು ಹೋಗಿದ್ದಾರೆ ಅವರು ಆ ಇಲಾಖೆಯನ್ನು ಅರ್ಥ ಮಾಡಿಕೊಳ್ಳುವಷ್ಟರಲ್ಲಿ ಅವರಿಗೆ ನೋಟೀಸ್ ಕಳಿಸುತ್ತಾರೆ

ನೀನು ನಮ್ಮ ಮಾತು ಕೇಳದಿದ್ದರೆ ವಾಪಸ್ ಹೋಗು ಎಂದು ಮೇಲುಗಡೆಯಿಂದ ಅದಕ್ಕೆ ಒಂದು ಲಾಬಿಯೇ ಇರುತ್ತದೆ. ಅದು ನನಗೆ ಗೊತ್ತಿದೆ. ಆದರೆ ಇಲಾಖೆಯಲ್ಲಿ ಯಾರಿದ್ದಾರೆ ಅವರ ಹತ್ತಿರ ಸಂಪತ್ತು ಅಡಕವಾಗಿದೆ. ಕೋಟ್ಯಾಂತರ ರೂಪಾಯಿಗಳ ಸಂಪತ್ತು ಅಡಕವಾಗಿದೆ. ಅಲ್ಲಿರತಕ್ಕ ಅಟೆಂಡರ್‌ನಿಂದ ಹಿಡಿದು ಪೀವನ್‌ನಿಂದ ಹಿಡಿದು ಪ್ರತಿಯೊಬ್ಬ ಮೇಲಾಧಿಕಾರಿಗಳವರೆಗೆ ಕೋಟ್ಯಾಂತರ ರೂಪಾಯಿ ಹಣ ಲೂಟಿ ಮಾಡಿದ್ದಾರೆ. ಬೇರೆ ಇಲಾಖೆಯ ನೌಕರರು ಎಲ್.ಟಿ.ಸಿ. ಹಾಕಿ ಹಣ ತೆಗೆದುಕೊಂಡು ಪ್ರವಾಸ ಹೊರಟರೆ ಇವರು ಬೇಕಾದರೆ ಇಟಲಿಗೆ ಹೋಗಿ ಬರುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ: ಶಾಮೀಲಾಗಿರತಕ್ಕ ಅಧಿಕಾರಿಗಳನ್ನು ದಸ್ತಗಿರಿ ಮಾಡಿದರೆ ಇದರಲ್ಲಿ ಶಾಮೀಲಾಗಿರುವ ಬೇರೆಯವರು ಹೊರಗಡೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮಿತ್ರರು ಇಲಾಖೆಯ ಬಗ್ಗೆ ಹೇಳಿದರು. ಅಲ್ಲಿ ಒಬ್ಬ ನಾಲ್ಕೂವರೆ ರೂಪಾಯಿ ಕೂಲಿ ಕೆಲಸಕ್ಕೆ ಸೇರಿದವನು ಕೇವಲ 15 ವರ್ಷಗಳಲ್ಲಿ ಆ ಕೆಲಸ ಬಿಟ್ಟು ಕಲ್ಲಿನ ಕಂಟ್ರಾಕ್ಟ್ ಕೆಲಸ ಈಗ ಮಾಡುತ್ತಿದ್ದಾನೆ. ಅವನಿಗೆ ಒಂದು ಕೋಟಿ ರೂಪಾಯಿಗಳ ಆಸ್ತಿ ಇದೆ. ಇವತ್ತು ಬೇಕಾದರೆ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ: ಇನ್ನೂ ಮೇಲಕ್ಕೆ ಹೋಗಿ ಅವನನ್ನು ಏತಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳುತ್ತೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ಮೈನ್ಸ್ ಅಂಡ್ ಜಿಯಾಲಜಿಕಲ್ ಇಲಾಖೆಯಲ್ಲಿ ವರ್ಗಾವಣೆ ಹೇಗೆ ನಡೆಯುತ್ತಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಇವತ್ತಿನ ದಿವಸ ಸಬ್‌ರಿಜಿಸ್ಟ್ರಾರ್‌ಗಳ ಪೋಸ್ಟಿಂಗ್ ಎಂದರೆ ಅದೊಂದು ಹಬ್ಬ ಇದ್ದ ಒಂದು ಸಬ್‌ರಿಜಿಸ್ಟ್ರಾರ್ ಪೋಸ್ಟ್‌ಗೆ ಅಡಿಷನಲ್ ಸಬ್ ರಿಜಿಸ್ಟ್ರಾರ್ ಎಂದು 2-3 ಹುದ್ದೆಗಳು ಕ್ರಿಯೇಟ್ ಆಗಿದೆ. ಬಹುಶಃ ಇದು ತಮಗೆ ಗೊತ್ತಿರಲಿಕ್ಕೆ ಇಲ್ಲವೆಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ: ಒಂದು ಪೋಸ್ಟಿಂಗ್ಸ್‌ಗೆ ಎಷ್ಟು ಹೇಳಿ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಆ ಬಗ್ಗೆ ಮಾತನಾಡಿಕೊಳ್ಳುತ್ತಾರೆ. ನಾನು ಮಾತನಾಡಿ ನನ್ನ ಬಾಯಿ ಏತಕ್ಕೆ ಹೊಲಸು ಮಾಡಿಕೊಳ್ಳಲಿ. ಅದೇ ರೀತಿ ಜಿಯಾಲಜಿಕಲ್ ಡಿಪಾರ್ಟ್‌ಮೆಂಟನಲ್ಲಿ ಪೋಸ್ಟಿಂಗ್‌ಗೆ ಅಡಿಷನಲ್ ಪೋಸ್ಟಿಂಗ್.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ: ನಿಮ್ಮ ಟೈಮಿನಲ್ಲಿ ಏನಾಯಿತು?

ಶ್ರೀ ಪಿ.ಜಿ.ಆರ್. ಸಿಂಧ್ಯ: ನೋಡಿ ಇದು ನೀವು ಹೇಳುವುದು ನಿಮ್ಮ ಟೈಮಿನಲ್ಲೇನಾಯಿತು ಇದನ್ನೇ ಮಾತನಾಡಿಕೊಂಡು ಕುಳಿತುಕೊಳ್ಳೋಣವೆ?

ಶ್ರೀ ಎಚ್. ಏಕಾಂತಯ್ಯ: ನಮ್ಮ ಟೈಮಿನಲ್ಲಿ ಏನಿತ್ತು ಅದರಲ್ಲಿ ಜಾಸ್ತಿಯಾಗಿದೆಯೇ? ನಮ್ಮಲ್ಲಿ ಏನು ರೇಟ್ ಇತ್ತು ಅದು ಜಾಸ್ತಿಯಾಗಿದೆಯೇ ಕಡಿಮೆಯಾಗಿದೆಯೇ ಹೇಳಿ

ಶ್ರೀ ಎಂ ರಾಮಪ್ಪ: ಆ ಟೈಮಿನಲ್ಲಿ ಏನೇನಾಗಿದೆ ಎಂಬುದೂ ಗೊತ್ತಾಗಬೇಕು.

ಶ್ರೀ ಸಿ.ಬೈರೇಗೌಡ: ನಮ್ಮ ಸಮಯದಲ್ಲಿ 5 ಲಕ್ಷ ಇತ್ತು ಎಂದು ಇಟ್ಟುಕೊಳ್ಳಿ ನಿಮ್ಮ ಸಮಯದಲ್ಲಿ ಎಷ್ಟು ಹೇಳಿ. ಈಗ 10 ಲಕ್ಷ ಆಗಿದೆಯೇ ಹೇಳಿರಿ ನೋಡೋಣ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ : ನಾನೇ ನಿಮ್ಮ ಹತ್ತಿರ ಕೇಳುತ್ತಿದ್ದೇನೆ. ಜಾಸ್ತಿಯಾಗಿದೆಯಾ ಅಥವಾ ಕಡಿಮೆಯಾಗಿದೆಯಾ ಎಂದು.

ಶ್ರೀ ಎಚ್. ಏಕಾಂತಯ್ಯ: ನಿಮಗೆ ಗೊತ್ತಿಲ್ಲದಿದ್ದರೆ ಸುಮ್ಮನಿರಿ.

ಉಪಾಧ್ಯಕ್ಷರು: ಎಲ್ಲಾ ಇನ್‌ಫ್ಲೇಷನ್.

ಶ್ರೀ ಪಿ.ಜಿ.ಆರ್. ಸಿಂಧ್ಯ: ಎಲ್ಲಾ ಇನ್‌ಫ್ಲೇಷನ್. ಸರಿಯಾಗಿ ಹೇಳಿದಿರಿ. ನಿಮಗೆ ಏತಕ್ಕೆ ಸಿಟ್ಟು ರಾಮಪ್ಪನವರೇ?

ಉಪಾಧ್ಯಕ್ಷರು: ಶ್ರೀಯುತ ಸಿಂಧ್ಯಾ ಅವರೇ ತಾವು ಮುಂದುವರೆಸಿ.

ಡಾ: ವೈ. ನಾಗಪ್ಪ: ನಾವು ಮಾತನಾಡತಕ್ಕ ವಿಷಯ ಏನಿದೆ ಇದು ಬಹಳ ಪ್ರಾಮುಖ್ಯವಾದ ವಿಷಯ. ಬಹಳ ದಿವಸಗಳಿಂದ ವಾಟಾಳ್ ನಾಗರಾಜ್ ಅವರು ಮಾತನಾಡುತ್ತಿದ್ದರು. ಆದರೆ ಇದನ್ನು ಇಷ್ಟೊಂದು ಲೈಟಾಗಿ ನಾವು ಡಿಸ್ಕಷನ್ ಮಾಡತಕ್ಕದ್ದು ಸರಿಯಲ್ಲ ಎಂದು ನನ್ನ ಭಾವನೆ. ನಾನು ರೂಲಿಂಗ್ ಪಾರ್ಟಿಯಲ್ಲಿದ್ದರೂ ಕೂಡ ಕರ್ನಾಟಕ ರಾಜ್ಯದಲ್ಲಿ ಯಾವರೀತಿ ಅದು ಶುರುವಾಯಿತು ಎಂಬುದು ಗೊತ್ತಿಲ್ಲ. ಆದರೆ ಈ ಕಲ್ಲಿನ ವ್ಯವಹಾರ ಏನಿದೆಯೋ, ಈ ಖನಿಜ ಸಂಪತ್ತಿನ ವ್ಯವಹಾರ ಏನಿದೆಯೋ ಈ ಬಗ್ಗೆ ಹೇಳಬೇಕೆಂದರೆ exploration of mineral materials ಕೂಡ ಸರಿಯಾದ ರೀತಿ ನಡೆಯುತ್ತಿಲ್ಲ. ಇದರ ಜೊತೆಗೆ ನಮ್ಮಲ್ಲಿರತಕ್ಕ ಭಾಗ್ಯವನ್ನು ಹೊರಗಡೆ ದೇಶಕ್ಕೆ ಮಾರಾಟ ಮಾಡಿ ನಮಗೆ ಅದರಿಂದ ಪ್ರಯೋಜನ ಇಲ್ಲದಿರುವ ರೀತಿಯಲ್ಲಿ ಅದರ ವ್ಯವಹಾರ ನಡೆಯುತ್ತಿರುವುದನ್ನು ನೋಡಿದರೆ ಬಹಳ ಬೇಜಾರಾಗುತ್ತದೆ. ಬೆಂಗಳೂರಿನಿಂದ ನಮ್ಮ ಊರಿಗೆ ಹೋಗುವಾಗ ಸುಂದರವಾದ ಬೆಟ್ಟದ ಸಾಲಿತ್ತು. ಇವತ್ತಿನ ದಿವಸ ಅಲ್ಲಿ ಭವ್ಯವಾದ ಕಟ್ಟಡ ಬರುತ್ತಿದೆ ಆ ಕಲ್ಲನ್ನು ಒಡೆದು ಮಾರಾಟ ಮಾಡುವುದಕ್ಕೋಸ್ಕರ. ಆದ್ದರಿಂದ ನನಗನ್ನಿಸುತ್ತದೆ. ಇದರ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಎಲ್ಲರೂ ಕೂಡ ಇದರ ಬಗ್ಗೆ ನಿಜ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮಾತನಾಡಬೇಕೇ ವಿನಾ ಈ ತರಹ ಒಂದು ರೀತಿ ಲೈಟಾಗಿ ಡಿಸ್ಕಷನ್ ಮಾಡುವುದು ಸರಿಯಲ್ಲವೆಂದು ನನ್ನ ಭಾವನೆ.

ಶ್ರೀ ಪಿ.ಜಿ.ಆರ್ ಸಿಂಧ್ಯ: ಮಾನ್ಯ ಉಪಾಧ್ಯಕ್ಷಿಣಿಯವರೆ ನಾನು ಇದನ್ನು ಬಹಳ ಸೀರಿಯಸ್ಸಾಗಿ ಹೇಳುತ್ತಿದ್ದೇನೆ.

ಶ್ರೀ ಎಚ್.ವಿಕಾಂತಯ್ಯ: ನಾಳೆ ಮುಂದುವರೆಸಬಹುದು. ಎರಡು ಗಂಟೆಯಾಯಿತು.

ಉಪಾಧ್ಯಕ್ಷರು: ಎರಡು ಗಂಟೆಗೆ ಮುಗಿಸುತ್ತಿರಲ್ಲ? ಇದೊಂದೇ ವಿಷಯದ ಬಗ್ಗೆ ಮೂರು ನಾಲ್ಕು ಗಂಟೆ ಹೊತ್ತು ಚರ್ಚೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ ಈ ಬಗ್ಗೆ ಒಂದು ವರ್ಷ ಮಾತನಾಡಿದರೂ ಮುಗಿಯುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಮಂತ್ರಿಗಳು ಏನು ಹೇಳಿದರು? ಇದನ್ನು ಡ್ರಾಪ್ ಮಾಡಬೇಕು. ಈಗ 1991ನೇ ಇಸವಿ ಪ್ರಾರಂಭವಾಗಿದೆ 1990 ನೇ ಇಸವಿಯದು ಮುಗಿಯಿತು. ಎಂದು ಹೇಳಿದರು. ಈ ತರಹ ಉತ್ತರ ಕೊಟ್ಟರೆ ಏನು ಹೇಳುವುದು? ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ಮಾತ್ರವಲ್ಲ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಸುಮಾರು 50-60 ತಾಲ್ಲೂಕುಗಳಲ್ಲಿ ಅವ್ಯಾಹತವಾಗಿ ಹಗಲುರಾತ್ರಿ ನಿರಂತರವಾಗಿ ಒಂದು ದಿವಸಕ್ಕೆ $1^1/_2$ ಕೋಟಿ ಎರಡು ಕೋಟಿ ರೂಪಾಯಿ ಸಂಪೂರ್ಣವಾಗಿ ನಮ್ಮ ರಾಜ್ಯದ ಬೊಕ್ಕಸಕ್ಕೆ ಅಥವಾ ರಾಷ್ಟ್ರದ ಬೊಕ್ಕಸಕ್ಕೆ ರಾಜ್ಯದ ಜನತೆಗೆ ಮೋಸ ಮಾಡಿ ಹೋಗುತ್ತಾ ಇರುವ ಸಂದರ್ಭದಲ್ಲಿ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ ಎಂದು ಹೇಳಿದರೆ ಸರ್ಕಾರ ಏನು ಮಾಡುತ್ತಿದೆಯೋ ಅರ್ಥವಾಗುತ್ತಿಲ್ಲ. ನಾನು ಒತ್ತಿ ಒತ್ತಿ ಈ ಮಾತನ್ನು ಹೇಳುತ್ತಿದ್ದೇನೆ ಇದನ್ನು ರಾಷ್ಟ್ರೀಕರಣ ಮಾಡಬೇಕೆಂದು ಎಂದು. ತಕ್ಷಣ ನಿಲ್ಲಿಸಬೇಕು ಈ ವ್ಯವಹಾರವನ್ನು ಪ್ರತಿ ವರ್ಷ ರಾಜ್ಯಕ್ಕೆ ಎಷ್ಟು ಹಣ ಬರುತ್ತಿದೆ? ನಿಮಗೆ ರಾಯಲ್ಟಿ ಬರುತ್ತಾ ಇರತಕ್ಕದ್ದು 65 ಲಕ್ಷ ರೂಪಾಯಿ. ನಿಮ್ಮ ಸರ್ಕಾರಕ್ಕೆ 65 ಲಕ್ಷ ರೂಪಾಯಿ ಬೇರೆ ಕಡೆಯಿಂದ ತುಂಬಿಸಿಕೊಳ್ಳುವುದಕ್ಕೆ ಯೋಗ್ಯತೆ ಇಲ್ಲವೇ? ಇದೆ. 3,000 ಕೋಟಿ

ರೂಪಾಯಿ ಬಜೆಟ್ ಮುಂದೆ 65 ಲಕ್ಷ ರೂಪಾಯಿ ಜುಜುಬಿ. ಹಣ. 65 ಲಕ್ಷ ರೂಪಾಯಿಗೋಸ್ಕರ ಏತಕ್ಕೆ ಇದನ್ನು ಬಿಟ್ಟಿದ್ದೀರಿ? ಇದನ್ನು ಮುಂದೆ ನಿಲ್ಲಿಸಿ. ಅದಾದನಂತರ ರಾಷ್ಟ್ರೀಕರಣ ಮಾಡಬೇಕೇ ಅಥವಾ ಯಾವರೀತಿ ಕಾನೂನು ಮಾಡಬೇಕು. ಕೇಂದ್ರ ಸರ್ಕಾರದವರು ಏನು ಬರೆದಿದ್ದಾರೆ. ನಮ್ಮ ಮಂತ್ರಿಗಳು ಏನು ಬರೆದಿದ್ದಾರೆ. ಕೇಂದ್ರ ಸರ್ಕಾರದ ಮಂತ್ರಿಗಳಲ್ಲಿ ಏನೇನು ಇನ್‌ವಾಲ್ವ್‌ಮೆಂಟ್ ಇದೆ ಇದರಲ್ಲಿ ಇದನ್ನೆಲ್ಲಾ ನಾವು ವಿಚಾರ ಮಾಡಬಹುದು. ಈ ತಕ್ಷಣ ಈ ಬಗ್ಗೆ ಸರ್ಕಾರ ಮಾಡಬೇಕಾಗಿರುವುದು ಏನು? ಏನು ಮಾಡಬೇಕು ಸರ್ಕಾರ? ಇವತ್ತು ರಾಜ್ಯ ಸರ್ಕಾರದಲ್ಲಿ ಖನಿಜ ಸಂಪತ್ತಿನ ಬಗ್ಗೆ ಸರಿಯಾದ ಲೆಕ್ಕ ಇಲ್ಲ? ಇವತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳನ್ನು ಕರೆಸಿ ರಾಜ್ಯದಲ್ಲಿ ಎಷ್ಟು ಖನಿಜ ಸಂಪತ್ತು ಇದೆ ಎನ್ನುವ ಬಗ್ಗೆ ಲೆಕ್ಕಾಚಾರ ಮಾಡಿಸಬೇಕು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ವಿಧದ ಒಳ್ಳೊಳ್ಳ ಕಲ್ಲು ನಮ್ಮ ರಾಜ್ಯದಲ್ಲಿ ಇವೆ. ಮಲ್ಟೀ ಕಲರ್ಡ್ ಗ್ರಾನೈಟ್ ಬ್ಲಾಕ್ ಗ್ರಾನೈಟ್ ವೈಟ್ ಗ್ರಾನೈಟ್ ಪಿಂಕ್ ಗ್ರಾನೈಟ್ ಎಲ್ಲೋ ಗ್ರಾನೈಟ್ ಹೀಗೆ ಬೇರೆ ಬೇರೆ ಬಣ್ಣದಲ್ಲಿರುವ ಗ್ರಾನೈಟ್‌ಗಳಿವೆ. ಈ ಅಪೂರ್ವವಾದಂಥ ಕಲ್ಲುಗಳು ರಾಜ್ಯದ ಯಾವ ಯಾವ ಭಾಗದಲ್ಲಿ ಸಿಗುತ್ತದೆ ಎನ್ನುವ ಬಗ್ಗೆ ಬ್ರಿಟೀಷ್‌ರ ಕಾಲದಲ್ಲಿ ಆಗಿರತಕ್ಕ ಸರ್ವೇ ರೆಕಾರ್ಡ್ಸ್ ಇವತ್ತು ಭೂವಿಜ್ಞಾನ ಇಲಾಖೆಯಲ್ಲಿ ಇಲ್ಲ. ಅಲ್ಲಿರತಕ್ಕ ಅಧಿಕಾರಿಗಳು ಸಾಮೀಲಾಗಿ ಲೂಟಿ ಮಾಡತಕ್ಕ ದೊರೆಗಳಿಗೆ ಅದನ್ನು ಕೊಟ್ಟಿದ್ದಾರೆ. ಈ ಆಪಾದನೆಯನ್ನು ನಾನು ಇವತ್ತು ಮಾಡುತ್ತಿದ್ದೇನೆ. ನಿಮ್ಮ ಸರ್ಕಾರದ ಇದನ್ನು ನಿಲ್ಲಿಸಬೇಕೆಂದಿದ್ದರೆ ನಿಲ್ಲಿಸಲಿ. ಅವರಿಗೆ ಮೂಲ ಪ್ರತಿಯನ್ನು ಕೊಟ್ಟಿದಾರೆ. ಇದು ಒಂದಾಯಿತು. ಇನ್ನು ಅರಣ್ಯ ಇಲಾಖೆಯಲ್ಲಿ ಇರತಕ್ಕ ಗ್ರಾನೈಟ್ ಏನಿದೆ ಅದು ನಿಮಗೆ ಗೊತ್ತಿದೆ. ಅರಣ್ಯದಲ್ಲಿ ಟೀಕ್ ಉಡ್ ಬೆಲೆಬಾಳುವಂತಹದ್ದ ಎಂದು ಹೇಳುತ್ತಾರೆ ಅದರ ಬ್ಲಾಕ್ ಗ್ರಾನೈಟ್ ತುಲನೆ ಮಾಡಿದರೆ ಟೀಕ್ ಉಡ್ ಏನೇನೂ ಅಲ್ಲ ಬ್ಲಾಕ್ ಗ್ರಾನೈಟ್ ಡೈಮಂಡಿಗಿಂತಾ ಮಿಗಿಲಾದ್ದದ್ದು. ಇವತ್ತಿನವರೆಗೆ ಅರಣ್ಯದಲ್ಲಿರುವ ಬ್ಲಾಕ್ ಗ್ರಾನೈಟ್‌ನ್ನು ಯಾರೂ ಟಚ್ ಮಾಡುತ್ತಿರಲಿಲ್ಲ. ಇವತ್ತು ಈ ಕಲ್ಲಿನ ಮಹತ್ವವನ್ನು ತಾವು ನೋಡಬೇಕು. ಕಪ್ಪು ಗ್ರಾನೈಟ್ ಮಲ್ಟಿಕಲರ್ಡ್ ಹಾಗೂ ಎಲ್ಲೋ ಕಲರ್ಫ್ ಗ್ರಾನೈಟ್ ಸಂಪತ್ತು ಇವತ್ತು ನಮ್ಮಲ್ಲಿ ಏನಿದೆ ಅಂತಹದ್ದು ಆಫ್ರಿಕಾದಲ್ಲೂ ಕೂಡಾ ಸಿಗುವುದಿಲ್ಲ. ಇಳಕಲ್ ಚಾಮರಾಜನಗರ ಕನಕಪುರ ಕೊಳ್ಳೇಗಾಲದಲ್ಲಿರುವ ಕಲ್ಲು ಇಡೀ ವಿಶ್ವದಲ್ಲೇ ಎಲ್ಲೂ ಸಿಗುವುದಿಲ್ಲ. ಕೊಲ್ಲಿ ಯುದ್ಧದಿಂದಾಗಿ ನಾಶಗೊಂಡಿರುವ ಕುವೈತ್ ಬಾಗ್ದಾದ್ ನಗರಗಳನ್ನು ಪುನರ್ ನಿರ್ಮಾಣಗೊಳಿಸಬೇಕಾಗಿರುವುದರಿಂದ ನಮ್ಮ ಗ್ರಾನೈಟ್ ಕಲ್ಲಿನ ಬೆಲೆ ಇವತ್ತು ಒಂದಕ್ಕೆ ನಾಲ್ಕರಷ್ಟಾಗಿದೆ. ಅದಕ್ಕೋಸ್ಕರ ಈ ಏಳು ಜನರಿಗೆ ಪರ್ಮಿಟ್ ಕೊಡಬೇಕೆಂದು ನೀವು ಯೋಚನೆ ಮಾಡಿದ್ದೀರಾ? ಏಕೆ ಹೆಸರನ್ನೂ ತಾವು ಹೇಳಿ. ಇವತ್ತು ನಾವು ಏನಾದರೂ ಮಾತನಾಡುವುದಕ್ಕೆ ಹೋದರೆ ನಿಮ್ಮ ಹೆಸರನ್ನೂ ಸೇರಿಸುತ್ತೇವೆ. ನಿಮಗೂ ಬೇಕೆ ಎಂದು ಹೇಳುತ್ತಾರೆ. ನೂರು ಎಕರೆ ನಮಗೂ ಬೇಕಾದರೆ ಕೊಡುತ್ತೇವೆ ಎಂದು ಹೇಳುತ್ತಾರೆ. ನನಗೆ ಅದು ಬೇಕಾಗಿಲ್ಲ. ಆದರೆ ನಾನು ಏಕೆ ಒತ್ತಾಯ ಮಾಡುತ್ತಿದ್ದೇನೆಂದರೆ ಸರ್ಕಾರದಲ್ಲಿ ಹಣ ಇಲ್ಲ ಹಣ ಇಲ್ಲ ಎಂದು ಹೇಳುತ್ತೀರಿ. ಏನು ಕೇಳಿದರೂ ದುಡ್ಡಿಲ್ಲ ಎನ್ನುತ್ತಿರಿ. ನಿಮ್ಮ ಸರ್ಕಾರವೇ ಮುಂದುವರಿದರೆ ಮುಂದಿನ ಜೂನ್‌ನಲ್ಲಿ ನಿಮ್ಮ ಸರ್ಕಾರದ ಸ್ಥಿತಿ ಏನಾಗುತ್ತದೆಂದು ಗೊತ್ತಾಗುತ್ತದೆ. ಅಲ್ಲಿಯವರೆಗೆ ತಾವು ಏನೇನು ಮಾಡಿದ್ದೀರಿ ಎಂದು ನಮಗೆಲ್ಲಾ ವಿಚಾರಗಳು ಗೊತ್ತದೆ. ಮುಂದಿನ ಜೂನ್‌ನಲ್ಲಿ ನಿಮ್ಮ ಸರ್ಕಾರ ಬ್ಯಾಂಕ್ರಪ್ ಆಗುತ್ತದೆ. ತಾವು ಏಕೆ ಓಟಾನ್ ಅಕೌಂಟ್ ತೆಗೆದುಕೊಳ್ಳುತ್ತಿದ್ದೀರಿ. ಏನು ಮಾಡುತ್ತಿದ್ದೀರೆಂದೆಲ್ಲಾ ನಮಗೆ ಗೊತ್ತಿದೆ. ನಿಮ್ಮ ಸರ್ಕಾರಕ್ಕೆ ದುಡ್ಡು ಬರುವ ದಾರಿಯನ್ನು ತೋರಿಸಿದಾಗ ನೀವು ಬೇಡ ಎಂದರೆ ನಾವೇನು ಮಾಡುವುದಕ್ಕಾಗುತ್ತದೆ? ನಾನು ಇವತ್ತು ಈ ವಿಷಯವನ್ನು ಏಕೆ ಇಷ್ಟು ತೀವ್ರವಾಗಿ ಒತ್ತಿ ಒತ್ತಿ

ಹೇಳುತ್ತಿದ್ದೇನೆಂದರೆ ಚಿನ್ನ ಬೆಳ್ಳಿ, ವಜ್ರ ವೈಡೂರ್ಯಕ್ಕಿಂತಾ ಬೆಲೆ ಬಾಳುವ ಈ ಸಂಪತ್ತನ್ನು ಪರ ರಾಷ್ಟ್ರಕ್ಕೆ ಕಳುಹಿಸುವ ಪಾಪದ ಕೆಲಸವನ್ನು ನಾವೂ ಮಾಡುವುದು ಬೇಡ. ಇಷ್ಟೆಲ್ಲಾ ನಡೆದರೂ ನೀವು ವಿರೋಧ ಪಕ್ಷದಲ್ಲಿ ಕೂತು ಏನು ಮಾಡುತ್ತಿದ್ದೀರಿ ಎಂದು ನಮ್ಮನ್ನು ರೆಕಾರ್ಡ್ಸ್ ನೋಡಿದ ಜನರು ಒತ್ತಾಯ ಮಾಡಿ ಕೇಳುತ್ತಿದ್ದಾರೆ. ಇದನ್ನು ರಾಷ್ಟ್ರೀಕರಣ ಮಾಡಬೇಕೆಂದು ಗಣಿ ಒತ್ತಾಯ ಮಾಡಿ ಹೇಳುತ್ತಿದ್ದೇನೆ ಮತ್ತು ಭೂ ಅಭಿವೃದ್ಧಿ ಇಲಾಖೆಯಲ್ಲಿ. ಇರತಕ್ಕ ಮೂಲಪ್ರತಿಗಳು ಏನಿವೆ ಅವುಗಳ ಬಗ್ಗೆ ಇವತ್ತು ಅಥವಾ ನಾಳೆ ಅಧಿಕಾರಿಗಳನ್ನು ಕರೆಸಿ ಕೇಳಿ. ಎಲ್ಲಾ ರೆಕಾರ್ಡ್ಸ್‌ನ್ನು ಫೋಟೋಸ್ಟ್ಯಾಟ್ ಮಾಡಿ ತೆಗೆದುಕೊಂಡು ಹೋಗಿದ್ದಾರೆ. ಪ್ರಮಾಣಿಕತೆ ಇದ್ದರೆ ಸದನ ಆದ ತಕ್ಷಣ ಆ ಬಗ್ಗೆ ತಾವು ಕರೆದು ಕೇಳಿ. ಅಲ್ಲಿ ಇವತ್ತು ರೆಕಾರ್ಡ್ಸ್ ಇಲ್ಲ. ಪ್ರಾಮಾಣಿಕತೆ ರೆಕಾರ್ಡ್ ತೆಗೆಸಿ ನೋಡಿ. ಫೋಟೋಸ್ಟಾಟ್ ಕಾಪಿ ತೆಗೆಸಿಕೊಂಡು ಹೋಗಿರುತ್ತಾರೆ. ಅವರ ಏಜೆನ್ಸಿಗಳು ಕೂಡ ಈ ಸದನದಲ್ಲಿ ಇದ್ದು ಕೇಳಿಸಿಕೊಳ್ಳುತ್ತಾರೆ ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದೆ. ಎಲ್ಲಾ ರೀತಿಯ ಆಮಿಷಗಳನ್ನೂ ಒಡ್ಡುತ್ತಾರೆ. ಆದರೆ ಈ ರಾಜ್ಯದ ಸಂಪತ್ತು ಉಳಿಯಬೇಕೆಂಬ ಆಸೆಯಿದ್ದರೆ ಈ ಒ ಂದು ಕ್ರಮ ತೆಗೆದುಕೊಳ್ಳಬೇಕು. ಇದು ಭೂವಿಜ್ಞಾನ ಇಲಾಖೆಯ ಡೈರೆಕ್ಟೋರೇಟ್ ಆಫ್ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯದ್ದು ಆದರೆ ಇನ್ನೊಂದು ಮೈಸೂರು ಮಿನರಲ್ಸ್ ಎಂದು ಇದೆ.

ಉಪಾಧ್ಯಕ್ಷರು: ಸಭೆಯನ್ನು ಈಗ ಮುಂದೂಡಲ್ಪಟ್ಟು ಸೋಮವಾರ ಸಂಜೆ 4 ಗಂಟೆಗೆ ಮತ್ತೆ ಸೇರಲಿದೆ.

(ಸಭೆಯು 2 ಘಂಟೆ 5 ನಿಮಿಷಗಳಿಗೆ ಮುಕ್ತಾಯವಾಗಿ ಪುನಃ 11ನೇ ಮಾರ್ಚಿ ಮಾಹೆ 1991ರ ಸೋಮವಾರದಂದು ಸಂಜೆ 4-00ಘಂಟೆಗೆ ಸೇರಲು ನಿಶ್ಚಯಿಸಲಾಯಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).